ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| **ಜನ್ಮಾಷ್ಟಮಿಯ ರಾತ್ರಿಪೂಜೆ, ಅರ್ಘ್ಯ, ಪಾರಣೆ** | **2** |
| **ರಾತ್ರಿಪೂಜೆ** | **2** |
| **ಪರಿವಾರಪೂಜೆ** | **8** |
| **ಯಶೋದಾ ದೇವಕಿಯರಲ್ಲಿ ಪ್ರಾರ್ಥನೆ** | **10** |
| **ಅರ್ಘ್ಯಪ್ರದಾನ** | **11** |
| **ಚಂದ್ರನಿಗೆ ಅರ್ಘ್ಯಪ್ರದಾನ** | **16** |
| **ಸಮರ್ಪಣೆಯ ಮಂತ್ರ** | **18** |
| **ಪಾರಣೆ** | **20** |
| **ವ್ರತಸಮರ್ಪಣೆ** | **22** |

## ಜನ್ಮಾಷ್ಟಮಿಯ ರಾತ್ರಿಪೂಜೆ, ಅರ್ಘ್ಯ, ಪಾರಣೆ

ಶ್ರೀಕೃಷ್ಣಾಷ್ಟಮಿಯಂದು ಬೆಳಗಿನಿಂದ ಸಂಜೆಯ ವರೆಗೆ ಮೂರು ಬಾರಿ ಸ್ನಾನವನ್ನು ಮಾಡಿ, ಪೂಜೆಗೆ ಅಣಿಗೊಳ್ಳಬೇಕಾದ ಕ್ರಮವನ್ನು ಹಿಂದಿನ ಲೇಖನದಲ್ಲಿ ವಿವರಿಸಿದ್ದೇನೆ.

ಈಗ ರಾತ್ರಿಯ ಮಹಾಪೂಜೆಯ ಕುರಿತು ತಿಳಿಯೋಣ

### ರಾತ್ರಿಪೂಜೆ

ಅರ್ಘ್ಯ ನೀಡುವ ಸಮಯಕ್ಕಿಂತ ಸುಮಾರು ಎರಡು ಎರಡೂವರೆ ಗಂಟೆಗಳ ಮುಂಚೆ ಸ್ನಾನವನ್ನು ಮಾಡಿದರೆ ವಿಸ್ತತವಾದ ಪೂಜೆ, ಪಾರಾಯಣಗಳನ್ನು ಮಾಡಲು ಅನುಕೂಲವಾಗುತ್ತದೆ.

ಶಾಸ್ತ್ರದಲ್ಲಿ ರಾತ್ರಿಯ ಪೂಜೆ ನಿಷಿದ್ಧ. ಆದರೆ, ಶ್ರೀಕೃಷ್ಣಜನ್ಮಾಷ್ಟಮಿಯಂದು ಮಾತ್ರ ರಾತ್ರಿಯಲ್ಲಿಯೇ ಷೋಡಶೋಪಚಾರ ಪೂಜೆ.

ಈ ಮಾತು ಭವಿಷ್ಯಪುರಾಣದಲ್ಲಿ ಸ್ಪಷ್ಟವಾಗಿ ಬಂದಿದೆ —

**ತ್ರಿಕಾಲಂ ಪೂಜಯೇದ್ ದೇವಂ**
**ದಿವಾರಾತ್ರೌ ವಿಶೇಷತಃ ।**
**ಅರ್ಧರಾತ್ರಾವಪಿ ತಥಾ**
**ಪುಷ್ಪೈಃ ನಾನಾವಿಧೈರಪಿ ॥**

ಜನ್ಮಾಷ್ಟಮಿಯಂದು ಮೂರು ಕಾಲದಲ್ಲಿಯೂ ಸ್ನಾನ ಮಾಡಿ ಪರಮಾತ್ಮನನ್ನು ಮೆಚ್ಚಿಸಬೇಕು. ಅರ್ಧರಾತ್ರಿಯಲ್ಲಿ ವಿಶೇಷವಾಗಿ ಅಂದರೆ ಮಹಾಪೂಜೆಯನ್ನು ಸಲ್ಲಿಸಬೇಕು.

ಶ್ರೀ ಮಧ್ವಾನುಜಾಚಾರ್ಯರೂ ಸಹ ಸಂನ್ಯಾಸಪದ್ಧತಿಯಲ್ಲಿ ಈ ಮಾತನ್ನು ತಿಳಿಸುತ್ತಾರೆ — **“ಉಪೋಷ್ಯ ಮಧ್ಯರಾತ್ರೇ ಚ ಪೂಜಯೇನ್ನಂದನಂದನಮ್ —** ಕೃಷ್ಣಾಷ್ಟಮಿಯಂದು ಉಪವಾಸ ಮಾಡಿ

ಮಧ್ಯರಾತ್ರಿಯಲ್ಲಿಯೇ ನಂದನ ಕಂದನನ್ನು ಪೂಜಿಸಬೇಕು”

ಹೀಗೆ, ಮಧ್ಯರಾತ್ರಿಯ ಪೂಜೆ ನಿಷಿದ್ಧವಾಗಿದ್ದರೂ, ಶ್ರೀಕೃಷ್ಣ ಹುಟ್ಟಿದ ಸಮಯ ಎನ್ನುವದಕ್ಕಾಗಿ ಕೃಷ್ಣಾಷ್ಟಮಿಯಂದು ಮಧ್ಯರಾತ್ರಿಯಲ್ಲಿಯೇ ಪೂಜೆ ವಿಹಿತ. ರಾತ್ರಿಯಲ್ಲಿ ಸ್ನಾನ ನಿಷಿದ್ಧವಾಗಿದ್ದರೂ, ರಾತ್ರಿ ಗ್ರಹಣವಿದ್ದಾಗ ಸ್ನಾನ ಮಾಡುವಂತೆ.

ರಾತ್ರಿಯಲ್ಲಿ ಮೇಲೆ ಹೇಳಿದಂತೆ ಗಂಡಸರು ಮತ್ತೊಮ್ಮೆ ಸ್ನಾನ ಮಾಡಿ ಪೂಜೆಗೆ ಅಣಿಯಾಗಬೇಕು. ನಮ್ಮ ಉದ್ಧಾರಕ್ಕಾಗಿ ಅವತರಿಸಿ ಬಂದ ಆ ಪರಬ್ರಹ್ಮನನ್ನು ಇಡಿಯ ಜೀವದ ಭಕ್ತಿಯಿಂದ ಆರಾಧಿಸಬೇಕು. ಪರಮಾತ್ಮನಿಗೆ ಷೋಡಶ ಉಪಚಾರಗಳನ್ನು, ಪಂಚಾಮೃತವನ್ನು, ನವನೀತವನ್ನು, ಭಕ್ತಿಪೂರ್ಣ ನಮಸ್ಕಾರಗಳನ್ನು ಸಮರ್ಪಿಸಿ ದೇವರನ್ನು ಭುಜಂಗಿಸಿದ ನಂತರ ಮಥುರಾ ವೃಂದಾವನಗಳನ್ನು ನೆನೆದು ಬೆಳಿಗ್ಗೆ ಮಾಡಿಟ್ಟಿರುವ ವಸುದೇವ ದೇವಕೀ ಮುಂತಾದ ಪ್ರತಿಮೆಗಳನ್ನು ಅರ್ಚಿಸಬೇಕು.

ನಮ್ಮ ಪ್ರತೀದಿವಸದ ಪೂಜೆಯ ಕ್ರಮವಿರುವಂತೆಯೇ ಕೃಷ್ಣಾಷ್ಟಮಿಯ ಪೂಜೆಯೂ ಇರುತ್ತದೆ.

ಕೃಷ್ಣಾಷ್ಟಮಿಯಂದು ವಿಶೇಷವಾಗಿ ಪಂಚಾಮೃತದ ಅಭಿಷೇಕವನ್ನು ಮಾಡಬೇಕು. ಮೊಸರಿನ ವ್ರತ ನಡೆಯುತ್ತಿರುವದರಿಂದ ಪೂರ್ಣವಾಗಿ ಬೆಣ್ಣೆ ತೆಗೆದ ಮಜ್ಜಿಗೆಯನ್ನು ಮೊಸರಿನ ಸ್ಥಾನದಲ್ಲಿ ಅರ್ಪಿಸಬೇಕು. ಬೆಣ್ಣೆಯನ್ನೂ ಅರ್ಪಿಸಬೇಕು.

ಈ ದಿವಸ ವಿಶೇಷವಾಗಿ ಗಂಧೋದಕವನ್ನು ಸಮರ್ಪಿಸಬೇಕು.

ಆ ನಂತರ ತುಳಸಿಪತ್ರಗಳಿಂದ, ವಿವಿಧ ರೀತಿಯ ಶುದ್ಧ ಪುಷ್ಪಗಳಿಂದ, ಗರಿಕೆಗಳಿಂದ ಬಿಲ್ವಪತ್ರಗಳಿಂದ ಶ್ರೀಕೃಷ್ಣನನ್ನು ಅರ್ಚಿಸಬೇಕು. ಅರ್ಚನೆ ಮಾಡಬೇಕಾದರೆ,

**ಯಜ್ಞಾಯ ಯಜ್ಞಪತಯೇ ಯಜ್ಞೇಶ್ವರಾಯ ಯಜ್ಞಸಂಭವಾಯ ಶ್ರೀ ಗೋವಿಂದಾಯ ನಮೋನಮಃ**

ಎಂಬ ಪರಮಮಂಗಳ ಮಂತ್ರವನ್ನು ಪಠಿಸಬೇಕು.

ಯಜ್ಞಾಯ — ಸಮಸ್ತಯಜ್ಞಗಳನ್ನು ಭಕ್ತರಿಂದ ಸ್ವೀಕರಿಸುವ ಯಜ್ಞನಾಮಕ ಭಗವಂತನಿಗೆ

ಯಜ್ಞಪತಯೇ — ಭಕ್ತರು ಮಾಡುವ ಸಮಸ್ತ ಯಜ್ಞಗಳ ಒಡೆಯನಾದವನಿಗೆ

ಯಜ್ಞೇಶ್ವರಾಯ — ಅಂತರ್ಯಾಮಿಯಾಗಿದ್ದು ನಮ್ಮಿಂದ ಯಜ್ಞಗಳನ್ನು ಮಾಡಿಸಿ, ಯಜ್ಞದಲ್ಲಿದ್ದು ಯಜ್ಞವನ್ನು ನಿಯಮಿಸಿ, ಯಜ್ಞದ ಫಲವನ್ನು ಕರುಣಿಸುವ ಯಜ್ಞೇಶ್ವರನಿಗೆ

ಯಜ್ಞಸಂಭವಾಯ — ಜಪಯಜ್ಞ, ಜ್ಞಾನಯಜ್ಞ, ದ್ರವ್ಯಯಜ್ಞ ಮುಂತಾದ ಸಮಸ್ತ ಯಜ್ಞಗಳಿಂದ ದೊರೆಯುವ

ಶ್ರೀ ಗೋವಿಂದಾಯ — ಗೋಪಾಲಕನಾದ ಶ್ರೀಕೃಷ್ಣನಿಗೆ

ನಮೋನಮಃ — ಅನಂತ ನಮಸ್ಕಾರಗಳು.

ನೈವೇದ್ಯಕ್ಕಾಗಿ ಹಾಲು, ಪಾಯಸ, ಜೇನು, ತುಪ್ಪದಲ್ಲಿ ಕರಿದ ಪದಾರ್ಥಗಳು, ಎಣ್ಣೆಯಲ್ಲಿ ಕರಿದ ಪದಾರ್ಥಗಳು, ವಿವಿಧ ರೀತಿಯ ಅವಲಕ್ಕಿಗಳು, ವಿವಿಧ ರೀತಿಯ ಹಣ್ಣುಗಳನ್ನು ಸಮರ್ಪಿಸಬೇಕು.

ಈಗ ಚಕ್ಕೋತ ಮತ್ತು ಮಾದಳದ ಹಣ್ಣಿನ ಕಾಲ. ಅವೆರಡನ್ನೂ ಸಮರ್ಪಿಸಬೇಕು ಎಂದು ಶ್ರೀ ಮಧ್ವಾನುಜಾಚಾರ್ಯರು ಸಂನ್ಯಾಸಪದ್ಧತಿಯಲ್ಲಿ ತಿಳಿಸಿದ್ದಾರೆ.

ಯಾರಿಗೆ ಸಾಕ್ಷಾತ್ತಾಗಿ ಪೂಜೆಯನ್ನು ಮಾಡಲು ಸಾಧ್ಯವಿಲ್ಲ, ಅಂತಹವರು, ಕಣ್ಣುಮುಚ್ಚಿ ಪರಮಾತ್ಮನನ್ನು ಧ್ಯಾನಿಸುತ್ತಾ, ಮೇಲಿನ ಮಂತ್ರವನ್ನು ಹೇಳುತ್ತ ಮನಸ್ಸಿನಲ್ಲಿಯೇ ಪೂಜೆ, ಅಭಿಷೇಕ, ಅರ್ಚನೆ ನೈವೇದ್ಯಗಳನ್ನು ಸಲ್ಲಿಸಬೇಕು.

ಕೃಷ್ಣಾಷ್ಟಮಿಯಂದು ಏಕಾದಶಿಯ ರೀತಿ ಪೂಜೆಯಲ್ಲ. ಉಳಿದ ದಿವಸಗಳಂತೆ ಗಂಧ, ಅಕ್ಷತೆ ಗಳನ್ನು ದೇವರಿಗೆ ಸಮರ್ಪಿಸಬೇಕು. ಗಂಧೋದಕದ ಅಭಿಷೇಕ, ಪಂಚಾಮೃತದ ಅಭಿಷೇಕ ಎಲ್ಲವೂ ಇದೆ.

## ಪರಿವಾರಪೂಜೆ

ಹೀಗೆ, ಸಾಲಿಗ್ರಾಮ, ಪ್ರತಿಮೆಗಳಿಗೆ ಹದಿನಾರು ಉಪಚಾರಗಳ ಪೂಜೆಯನ್ನು ಮುಗಿಸಿ, ಬೆಳಿಗ್ಗೆ ಗೋಪೀಚಂದನದಲ್ಲಿ ಮಾಡಿಟ್ಟ ಕೃಷ್ಣ-ಬಲರಾಮ-ವಸುದೇವಾದಿಗಳ ಪೂಜೆಯನ್ನು ಆರಂಭಿಸಬೇಕು. ವಸುದೇವದೇವಕೀ ಮುಂತಾದವರ ಪೂಜೆಗಾಗಿ ವಿಶೇಷ ಮಂತ್ರಗಳನ್ನು ಪುರಾಣಗಳು ತಿಳಿಸಿವೆ. ಅದನ್ನು ಬಲ್ಲವರಿಂದ ಕಲಿತು ಪೂಜಿಸಬೇಕು. ಸಾಧ್ಯವಿಲ್ಲದ ಪಕ್ಷದಲ್ಲಿ ಕೆಳಗಿನ ನಾಮಮಂತ್ರಗಳನ್ನು ಪಠಿಸುತ್ತ ಪೂಜಿಸಬೇಕು.

**ವಸುದೇವಾಯ ನಮಃ**
**ದೇವಕ್ಯೈ ನಮಃ**

**ನಂದಾಯ ನಮಃ**
**ಯಶೋದಾಯೈ ನಮಃ**

**ಬಲರಾಮಾಯ ನಮಃ**
**ಶ್ರೀಕೃಷ್ಣಾಯ ನಮಃ**

**ದುರ್ಗಾಯೈ ನಮಃ**
**ಸುಭದ್ರಾಯೈ ನಮಃ**

**ಗೋಪಾಲಕೇಭ್ಯೋ ನಮಃ**
**ಗೋಪಿಕಾಸ್ತ್ರೀಭ್ಯೋ ನಮಃ**

ಎಂದು ಗರಿಕೆಗಳಿಂದ, ತುಳಸಿಯಿಂದ, ಹೂಗಳಿಂದ ಅರ್ಚಿಸಿ, ಭಾಗವತದಲ್ಲಿ ಬಂದಿರುವ ಅವತಾರದ ಸ್ತೋತ್ರವನ್ನು ಪರಮಾತ್ಮನ ಮುಂದೆ ಹೇಳುತ್ತ ಪರಮಾತ್ಮನ ಅವತಾರದ ಪರಮಮಂಗಳ ಘಟನೆಯನ್ನು ಸ್ಮರಿಸಬೇಕು.

ಪರಮಾತ್ಮನಿಗಾಗಿ ತಪಸ್ಸು ಮಾಡಿ, ಜನನ ಮರಣವಿಲ್ಲದ, ಗರ್ಭವಾಸದ ದುಃಖವಿಲ್ಲದ ಪರಮಾತ್ಮನನ್ನು ತನ್ನ ಪರಮಮಂಗಳ ಗರ್ಭದಲ್ಲಿ ಧರಿಸಿ ಹಡೆದು ನಮಗಾಗಿ ನೀಡಿದ ದೇವಕೀದೇವಿಯನ್ನು, ಅವನ್ನು ಲಾಲಿಸಿ ಪಾಲಿಸಿ ಬೆಳೆಸಿದ ಯಶೋದಾಮಾತೆಯನ್ನು ಭಕ್ತಿಯಿಂದ ಸ್ಮರಿಸಬೇಕು.

## ಯಶೋದಾ ದೇವಕಿಯರಲ್ಲಿ ಪ್ರಾರ್ಥನೆ

ಮುಖ್ಯವಾಗಿ ಮಕ್ಕಳಾಗದವರು, ಮಕ್ಕಳನ್ನು ಪಡೆಯಲು ಸಿದ್ಧರಾಗಿರುವ ನವದಂಪತಿಗಳು ದೇವಕೀ, ಯಶೋದೆಯರನ್ನು ಈ ರೀತಿ ಪ್ರಾರ್ಥಿಸಬೇಕು.

**ಯಥಾ ಪುತ್ರಂ ಹರಿಂ ಲಬ್ಧ್ವಾ**
**ಪ್ರಾಪ್ತಾ ತ್ವಂ ನಿರ್ವೃತಿಂ ಪುರಾ ।**
**ತಾಮೇವ ನಿರ್ವೃತಿಂ ದೇವಿ**
**ಸುಪುತ್ರೇ ದರ್ಶಯಸ್ವ ಮೇ ॥**

ಅಮ್ಮಾ, ಪರಮಾತ್ಮನನ್ನು ಮಗನನ್ನಾಗಿ ಪಡೆದು ನೀನೇನು ಸುಖವನ್ನು ಅನುಭವಿಸಿದೆಯೋ, ಅದೇ ರೀತಿಯ ಸಂತಾನಸೌಖ್ಯವನ್ನು ನಾವೂ ಅನುಭವಿಸುವಂತೆ ಮಾಡು.

ಯಾರಿಗೆ ಸಾಕ್ಷಾತ್ತಾಗಿ ಪೂಜೆ ಮಾಡಲು ಸಾಧ್ಯವಿಲ್ಲವೋ, ಅವರು ಕನಿಷ್ಠ ಮೇಲಿನ ಮಂತ್ರಗಳನ್ನು ಹೇಳಿ ಮನಸ್ಸಿನಿಂದಾದರೂ ಪೂಜೆಯನ್ನು ಸಲ್ಲಿಸಬೇಕು. ಈ ಮಾತು (ಕರ್ಮ ಮಾಡಲು ಶಕ್ತಿಯಿಲ್ಲದವರು, ಸ್ತೋತ್ರ

ಮಾಡಿಯಾದರೂ ಭಗವಂತನನ್ನು ಮೆಚ್ಚಿಸುವ ವಿಷಯ) ವೇದಗಳಲ್ಲಿಯೇ ಬಂದಿದೆ. ವಿಶ್ವನಂದಿನಿಯ ಮತ್ತೊಂದು ಲೇಖನದಲ್ಲಿ ಅದನ್ನು ವಿಸ್ತಾರವಾಗಿ ತಿಳಿಸುತ್ತೇನೆ.

## ಅರ್ಘ್ಯಪ್ರದಾನ

ಇಷ್ಟು ಕಾರ್ಯಗಳನ್ನು ಚಂದ್ರೋದಯವಾಗುವದರ ಒಳಗೆ ಮುಗಿಸಿ, ಚಂದ್ರೋದಯವಾಗುತ್ತಿದ್ದಂತೆ ಪರಮಾತ್ಮನಿಗೆ ಅರ್ಘ್ಯ ನೀಡಲು ಉದ್ಯುಕ್ತರಾಗಬೇಕು.[1]

ಭಗವಂತನ ಕಾರುಣ್ಯಕ್ಕೆ ಎಣೆಯಿಲ್ಲ. ಅವನು ನಮಗಾಗಿ ಅವತರಿಸಿದ ಈ ದಿನದಂದು, ಅವನಿಗಾಗಿ ಉಪವಾಸವಿದ್ದು, ಪೂಜೆ ಮಾಡಿ ರಾತ್ರಿಯಲ್ಲಿ ಅರ್ಘ್ಯವನ್ನು ಸಮರ್ಪಿಸಿದರೆ ಸಮಗ್ರ ಭೂಮಿಯನ್ನೇ ಪಾತ್ರೆಯನ್ನಾಗಿ ಮಾಡಿ, ಅದರಲ್ಲಿ ರತ್ನ ಕನಕಗಳನ್ನು ತುಂಬಿಸಿ ವೈಷ್ಣವೋತ್ತಮರಿಗೆ ದಾನ ಮಾಡಿದರೆ ಅದೆಷ್ಟು ಪುಣ್ಯ ಬರುತ್ತದೆಯೋ

---

[1] ಚಂದ್ರೋದಯ ಊರಿನಿಂದ ಊರಿಗೆ ಬೇರೆಯಿರುತ್ತದೆ, ನಿಮ್ಮ ಊರಿನ ಚಂದ್ರೋದಯ ಎಷ್ಟು ಗಂಟೆಗೆ ಎನ್ನುವದನ್ನು Internet ಮುಖಾಂತರ ತಿಳಿದುಕೊಳ್ಳಬಹುದು.

ಅಷ್ಟು ಪುಣ್ಯವನ್ನು ಕೇವಲ ಕೃಷ್ಣಾಷ್ಟಮಿಯ ಅರ್ಘ್ಯದಿಂದ ಪರಮಾತ್ಮ ನೀಡುತ್ತಾನೆ. ಹೀಗಾಗಿ ಸಮಗ್ರ ಜೀವದ ಭಕ್ತಿಯಿಂದ ಪರಮಾತ್ಮನಿಗೆ ಮತ್ತು ದೇವತೆಗಳಿಗೆ ಅರ್ಘ್ಯವನ್ನು ಸಮರ್ಪಿಸಬೇಕು.

> **ಯೋ ದದ್ಯಾತ್ ಸಕಲಾಮುರ್ವೀಂ**
> **ಸರ್ವರತ್ನಸಮನ್ವಿತಾಮ್**
> **ಅರ್ಘ್ಯದಾನೇನ ತತ್ ಪುಣ್ಯಂ**
> **ಲಭತೇ ಮಾನವಃ ಶುಚಿಃ**

**ಇಲ್ಲಿ ಶುಚಿ ಎನ್ನುವ ಶಬ್ದವನ್ನು ಅವಶ್ಯವಾಗಿ ನಾವು ಗಮನಿಸಬೇಕು. ಮಧ್ಯರಾತ್ರಿಯಲ್ಲಿ ತಾನೇ, ಅರ್ಘ್ಯ ಎಂದು ಉದಾಸೀನ ಮಾಡಿ ಮಲಗಿ ಎದ್ದು ಅರ್ಘ್ಯ ನೀಡಿದರೆ ಫಲ ಬರುವದಿಲ್ಲ. ಆ ದಿವಸ ತ್ರಿಕಾಲ ಸ್ನಾನವನ್ನು ಮಾಡಿ, ರಾತ್ರಿಯಲ್ಲಿಯೂ ಸ್ನಾನ ಮಾಡಿ ಅರ್ಘ್ಯವನ್ನು ನೀಡುವದು ಉತ್ತಮ ಪಕ್ಷ. (ಶಕ್ತಿ, ಸೌಕರ್ಯ ಇರುವ ಸ್ತ್ರೀಯರೂ ಸಹ ರಾತ್ರಿ ಸ್ನಾನ ಮಾಡಿ ಅರ್ಘ್ಯ ನೀಡಬೇಕು. ಇಲ್ಲದಿದ್ದಲ್ಲಿ ರೇಶಿಮೆಯ ವಸ್ತ್ರವನ್ನುಟ್ಟು ಅರ್ಘ್ಯವನ್ನು ನೀಡಬೇಕು.)**

ಅರ್ಘ್ಯ ಎಂದರೆ ಒಬ್ಬ ದೇವತೆಗಾಗಿ ಕೈಗಳ ಮಧ್ಯದಿಂದ ನೀರನ್ನು ಬಿಡುವದು. ಇಷ್ಟು ಸಣ್ಣ ಕರ್ಮಕ್ಕೆ ಅಷ್ಟು ಹಿರಿದಾದ ಫಲವನ್ನು ನೀಡುವ ಆ ಸರ್ವೋತ್ತಮನ ಕಾರುಣ್ಯವನ್ನು ಭಕ್ತಿಯಿಂದ ಮೇಲಿಂದಮೇಲೆ ನೆನೆಯಬೇಕು.
ಆ ನಂತರ ಒಂದು ತೆಂಗಿನಕಾಯಿ ಅಥವಾ ನಿಂಬೆಹಣ್ಣು,[2] ಬೆಳ್ಳಿಯ ಅಥವಾ ಬಂಗಾರದ ಒಂದು ನಾಣ್ಯ, **ಪೂಜೆ ಮಾಡಿರದ** ಹೂಗಳನ್ನು ಒಂದು ತಟ್ಟೆಯಲ್ಲಿಟ್ಟುಕೊಳ್ಳಬೇಕು.

ಆ ಬಳಿಕ ಶಂಖದಲ್ಲಿ ನೀರನ್ನು ತುಂಬಿಸಿ ಬಲಗೈಯಿಂದ ಶಂಖವನ್ನು ಎಡಗೈಗೆ ನೀಡಬೇಕು. **ಎಡಗೈಯಲ್ಲಿ ಒಂದು ದೇವರ ಬಟ್ಟೆಯನ್ನು ಹಿಡಿದು ಅ ಬಟ್ಟೆಯಿಂದ ಶಂಖವನ್ನು ಹಿಡಿದುಕೊಳ್ಳಬೇಕು. ಬರಿಯ ಎಡಗೈಯಲ್ಲಿ ಶಂಖವನ್ನು ಹಿಡಿಯಬಾರದು.**

---

[2] ನಿಂಬೆಹಣ್ಣನ್ನಿಟ್ಟು ಅರ್ಘ್ಯ ನೀಡುವದರ ಕುರಿತು ಶಾಸ್ತ್ರದ ವಚನ ನನ್ನ ಕಣ್ಣಿಗೆ ಕಂಡಿಲ್ಲ. ಆದರೆ, ಪ್ರತಿಯೊಬ್ಬ ಹಿರಿಯರೂ ಆ ರೀತಿ ಅನುಸರಿಸುತ್ತ ಬರುತ್ತಿದ್ದಾರೆ. ಹೀಗಾಗಿ ಶಿಷ್ಟಾಚಾರವೆಂದು ಪಾಲಿಸಬೇಕು. ದೊಡ್ಡವರ ಆಚಾರವನ್ನು ಬಾಧಕವಿಲ್ಲದೇ ತಿರಸ್ಕರಿಸಬಾರದು. ತೆಂಗಿನಕಾಯಿಯ ಜೊತೆಗೆ ಅರ್ಘ್ಯ ನೀಡುವ ಕ್ರಮವನ್ನು ಶ್ರೀ ಕೃಷ್ಣಾಚಾರ್ಯರು ತಮ್ಮ ಸ್ಮೃತಿಮುಕ್ತಾವಳಿಯಲ್ಲಿ ತಿಳಿಸಿದ್ದಾರೆ.

ನಂತರ ತಟ್ಟೆಯಲ್ಲಿರುವ ನಾಣ್ಯ, ತೆಂಗಿನಕಾಯಿ ಅಥವಾ ನಿಂಬೆಹಣ್ಣು ಮತ್ತು ಹೂಗಳನ್ನು ತೆಗೆದುಕೊಂಡು, ಬಲಗೈನ ಅಂಗೈಯಲ್ಲಿ ಅವನ್ನು ಹಿಡಿದು, ಕೈಯನ್ನು ಕೆಳಮುಖ ಮಾಡಿ ಕೆಳಗಿನ ಮಂತ್ರವನ್ನು ಹೇಳುತ್ತ ಮೂರು ಬಾರಿ ದೇವಕೀಸಮೇತನಾದ ಶ್ರೀಕೃಷ್ಣನಿಗೆ ದೇವರ ಮನೆಯಲ್ಲಿಯೇ  ಅರ್ಘ್ಯವನ್ನು ನೀಡಬೇಕು.

ಅರ್ಘ್ಯದ ನೀರು ನೆಲದ ಮೇಲೆ ಬೀಳದಂತೆ ಒಂದು ಪಾತ್ರೆಯಲ್ಲಿ ಬೀಳುವಂತೆ ನೋಡಿಕೊಳ್ಳಬೇಕು.

**[3]ಜಾತಃ ಕಂಸವಧಾರ್ಥಾಯ**
**ಭೂಭಾರೋತ್ತಾರಣಾಯ ಚ ।**
**ಕೌರವಾಣಾಂ ವಿನಾಶಾಯ**
**ದೈತ್ಯಾನಾಂ ನಿಧನಾಯ ಚ  ॥**

---

[3] ಅರ್ಘ್ಯದ ಕಾಲದಲ್ಲಿ ಈ ಮಂತ್ರ ಪಠಿಸಬಾರದು ಎಂದು ಬನ್ನಂಜೆ ತಕರಾರು ತೆಗೆದಿದ್ದಾರೆ. ಅವರ ಸಂಸ್ಕೃತ ಮತ್ತು ಕನ್ನಡದ ಎರಡೂ ಪುಸ್ತಕಗಳಿಗೆ ನಾನು ಸಪ್ರಮಾಣವಾಗಿ ಉತ್ತರಿಸುತ್ತೇನೆ. ಈ ಅರ್ಘ್ಯದ ಮಂತ್ರಗಳನ್ನು ಶ್ರೀ ರಾಘವೇಂದ್ರಗುರುಸಾರ್ವಭೌಮರ ಶಿಷ್ಯರಾದ ಶ್ರೀ ಕೃಷ್ಣಾಚಾರ್ಯರು ತಮ್ಮ ಸ್ಮೃತಿಮುಕ್ತಾವಳಿಯಲ್ಲಿ ತಿಳಿಸಿದ್ದಾರೆ. ನೀವು ನಿಶ್ಚಿಂತರಾಗಿ  ಈ ಮಂತ್ರವನ್ನು ಪಠಿಸಿ ಅರ್ಘ್ಯವನ್ನು ನೀಡಿ. ಬನ್ನಂಜೆಗೆ ನಾನು ಉತ್ತರಿಸುತ್ತೇನೆ.

**ಪಾಂಡವಾನಾಂ ಹಿತಾರ್ಥಾಯ**
**ಧರ್ಮಸಂಸ್ಥಾಪನಾಯ ಚ ।**
**ಗೃಹಾಣಾರ್ಘ್ಯಂ ಮಯಾ ದತ್ತಂ**
**ದೇವಕ್ಯಾ ಸಹಿತೋ ಹರೇ ॥**
**ದೇವಕೀಸಹಿತ-ಶ್ರೀಕೃಷ್ಣಾಯ ನಮಃ ।**
**ಇದಮರ್ಘ್ಯಂ ಸಮರ್ಪಯಾಮಿ ।**

ದುರುಳಕಂಸನನ್ನು ಕೊಲ್ಲಲಿಕ್ಕಾಗಿ,
ಭೂಮಿಯ ಭಾರವನ್ನು ಇಳಿಸುವದಕ್ಕಾಗಿ,
ಸಕಲದುಷ್ಟಗುಣಗಳಿಗೆ ಆಶ್ರಯರಾದ ಕೌರವರ ವಿನಾಶಕ್ಕಾಗಿ
ನಮ್ಮನಮ್ಮ ಮನಸ್ಸಿನಲ್ಲಿ ನೆಲೆನಿಂತ ದೈತ್ಯರ ಸಂಹಾರಕ್ಕಾಗಿ,
ಪಾಂಡವರ ಹಿತಕ್ಕಾಗಿ,
ಧರ್ಮಸಂಸ್ಥಾಪನೆಗಾಗಿ ಅವತರಿಸಿಬಂದ ಓ ಕೃಷ್ಣರೂಪದ ಪರಬ್ರಹ್ಮನೇ
ತಾಯಿ ದೇವಕಿಯ ಸಮೇತನಾಗಿ ಈ ಅರ್ಘ್ಯವನ್ನು ಸ್ವೀಕರಿಸು.

ಹೀಗೆ ಮೂರು ಬಾರಿ ಅರ್ಘ್ಯವನ್ನು ನೀಡಬೇಕು.

## ಚಂದ್ರನಿಗೆ ಅರ್ಘ್ಯಪ್ರದಾನ

ಆ ನಂತರ ಶಂಖವನ್ನು, ಹಾಲನ್ನು, ಮೇಲೆ ಹೇಳಿದ ಅರ್ಘ್ಯದ ಪದಾರ್ಥಗಳನ್ನು ಮನೆಯ ಅಂಗಳಕ್ಕೆ ತೆಗೆದುಕೊಂಡು ಬರಬೇಕು.

ಅಲ್ಲಿ ಮೊದಲೇ ಮಾಡಿದ ರಂಗವಲ್ಲಿಯ ಮೇಲೆ ಅರ್ಘ್ಯದ ಪಾತ್ರೆಯನ್ನಿಟ್ಟು ಮೊಣಕಾಲೂರಿ ಕುಳಿತು

**ಶಶಿನೇ ಚಂದ್ರದೇವಾಯ**
**ಸೋಮದೇವಾಯ ಚೇಂದವೇ ।**
**ಮೃಗಿಣೇ ಸಿತಬಿಂಬಾಯ**
**ಲೋಕದೀಪಾಯ ದೀಪಿನೇ ॥**

**ರೋಹಿಣೀಸಕ್ತಚಿತ್ತಾಯ**
**ಕನ್ಯಾದಾನಪ್ರದಾಯಿನೇ ।**
**ಶೀತದೀಧಿತಿಬಿಂಬಾಯ**
**ತಾರಕಾಪತಯೇ ನಮಃ ॥**

ಶಶೀ, ಚಂದ್ರ, ಸೋಮ, ಇಂದು, ಮೃಗೀ, ಸಿತಬಿಂಬ, ಲೋಕದೀಪ, ದೀಪೀ, ರೋಹಿಣೀಸಕ್ತಚಿತ್ತ, ಕನ್ಯಾದಾನಪ್ರದಾಯೀ,

ಶೀತದೀಧಿತಿಬಿಂಬ, ತಾರಕಾಪತಿ ಎಂಬ ಹನ್ನೆರಡು ಹೆಸರುಳ್ಳ ಚಂದ್ರನಿಗೆ ಭಕ್ತಿಯಿಂದ ನಮಸ್ಕಾರಗಳನ್ನು ಸಲ್ಲಿಸಬೇಕು.

ಆ ನಂತರ ಶಂಖದಲ್ಲಿ ಹಾಲನ್ನು ತುಂಬಿಸಿ, ಬಲಗೈಯಲ್ಲಿ ಎತ್ತಿಕೊಂಡು, ಬಟ್ಟೆಯಿರುವ ಎಡಗೈಯಲ್ಲಿ ಅದನ್ನು ಹಿಡಿದು, ಆಗತಾನೇ ಉದಯಿಸಿದ ಚಂದ್ರನನ್ನು ಪ್ರೀತಿಯಿಂದ ಕಾಣುತ್ತ

**ಕ್ಷೀರೋದಾರ್ಣವಸಂಭೂತ**
**ಅತ್ರಿನೇತ್ರಸಮುದ್ಭವ ।**
**ಗೃಹಾಣಾರ್ಘ್ಯಂ ಮಯಾ ದತ್ತಂ**
**ರೋಹಿಣ್ಯಾ ಸಹಿತಃ ಶಶಿನ್ ॥**

**ರೋಹಿಣೀಸಹಿತಚಂದ್ರಾಯ ನಮಃ ।**
**ಇದಮರ್ಘ್ಯಂ ಸಮರ್ಪಯಾಮಿ ।**

ಅಮೃತಮಥನದಲ್ಲಿ ಉದಿಸಿದ, ಆ ಬಳಿಕ ಅತ್ರಿಯ ಕಣ್ಣಿಳಿಂದ ಮತ್ತೊಮ್ಮೆ ಅವತರಿಸಿದ ಓ ಚಂದಾಮ, ರೋಹಿಣಿಯ ಸಮೇತನಾಗಿ ಈ ಅರ್ಘ್ಯವನ್ನು ಸ್ವೀಕರಿಸು ಎಂದು ಪ್ರಾರ್ಥಿಸಿ ಮೂರು ಬಾರಿ ಹಾಲಿನಿಂದ ಅರ್ಘ್ಯವನ್ನು ನೀಡಬೇಕು.

## ಸಮರ್ಪಣೆಯ ಮಂತ್ರ

ಹೀಗೆ  ಶ್ರೀಕೃಷ್ಣನಿಗೆ ನೀರಿನಿಂದಲೂ, ಚಂದ್ರನಿಗೆ ಹಾಲಿನಿಂದಲೂ ಅರ್ಘ್ಯವನ್ನು ನೀಡಿ ಮತ್ತೆ ದೇವರ ಮನೆಗೆ ಬಂದು ಬೆಳಗಿನಿಂದ ಮಾಡಿದ ಸಮಗ್ರ ಸತ್ಕರ್ಮಗಳನ್ನೂ ಪರಮಾತ್ಮನಿಗೆ ಒಪ್ಪಿಸಿಕೊಳ್ಳಬೇಕು.

**ವಿಶ್ವಾಯ ವಿಶ್ವಪತಯೇ ವಿಶ್ವೇಶ್ವರಾಯ**
**ವಿಶ್ವಸಂಭವಾಯ ಶ್ರೀಗೋವಿಂದಾಯ**
**ನಮೋನಮಃ**

ಸಮಗ್ರ ವಿಶ್ವವನ್ನು ಸೃಷ್ಟಿ ಮಾಡಿ ಅದರಲ್ಲಿ ವ್ಯಾಪಿಸಿ ಇದ್ದು ವಿಶ್ವ ಎಂದು ಕರೆಸಿಕೊಳ್ಳುವ
ಸಮಗ್ರ ವಿಶ್ವದ ಅಧಿಪತಿಯಾದ,
ಸಮಗ್ರ ವಿಶ್ವದ ಮೇಲೆ ಆಧಿಪತ್ಯವನ್ನು ಹೊಂದಿರುವ ರುದ್ರ ಬ್ರಹ್ಮರಿಗೂ ಒಡೆಯನಾದ
ವಿಶ್ವದ ಉದ್ಧಾರಕ್ಕಾಗಿ ವಿಶ್ವದಲ್ಲಿ ಅನಂತ ಅವತಾರಗಳಿಂದ ಅವತರಿಸಿ ಬರುವ
ಶ್ರೀಗೋವಿಂದನಿಗೆ ನಮಸ್ಕಾರಗಳು ಎಂದು ಸರ್ವಸ್ವವನ್ನೂ ಅವನಿಗೆ ಸಮರ್ಪಿಸಬೇಕು.

**ಆ ನಂತರ ಮೂರು ಬಾರಿ ತೀರ್ಥವನ್ನು ಸ್ವೀಕರಿಸಿ, ಗಂಧಾಕ್ಷತೆಗಳನ್ನು ಹಚ್ಚಿಕೊಂಡು, ದೇವರಿಗೆ ನಮಸ್ಕರಿಸಿ ನಿದ್ರೆಯನ್ನು ಮಾಡಬೇಕು.**

ಜಾಗರಣ ಮಾಡುವದನ್ನೂ ಪುರಾಣಗಳು ವಿಧಿಸುತ್ತವೆ. ಆದರೆ ಶ್ರೀಮದಾಚಾರ್ಯರು **ತತಃ ಸ್ವಾಪಂ ಸಮಾಚರೇತ್** ಎಂದು ನಿದ್ರೆಯನ್ನು ಮಾಡಬೇಕು ಎಂದು ವಿಧಿಸಿದ್ದಾರೆ. ಹೀಗಾಗಿ ಮಾಧ್ವರಲ್ಲಿ  ಕೃಷ್ಣಾಷ್ಟಮಿಯಂದು ಜಾಗರಣೆ ಮಾಡುವ ಸಂಪ್ರದಾಯವಿಲ್ಲ.

ಇದಕ್ಕೂ ಮಹತ್ತ್ವದ ಕಾರಣವಿದೆ. ಶ್ರೀಮದಾಚಾರ್ಯರು ನಿದ್ರೆಯನ್ನು ವಿಧಿಸಿರುವದರ ಹಿಂದಿನ ಆ ಕಾರಣದ ಕುರಿತು ಒಂದು ಚರ್ಚೆಯ ಆವಶ್ಯಕತೆಯೂ ಇದೆ. ಮತ್ತೊಂದು ಸಂದರ್ಭದಲ್ಲಿ ವಿಸ್ತೃತವಾಗಿ ವಿವರಿಸುತ್ತೇನೆ.

## ಪಾರಣೆ

ಕೃಷ್ಣಾಷ್ಟಮಿಯಲ್ಲಿ ಅಷ್ಟಮೀ ತಿಥಿ ಮುಗಿದ ಬಳಿಕ ಪಾರಣೆ. ಅಷ್ಟಮೀ ತಿಥಿ ರಾತ್ರಿಯಲ್ಲಿಯೇ ಮುಗಿಯುತ್ತಿದ್ದರೆ ಸೂರ್ಯೋದಯದ ಬಳಿಕ ಪಾರಣೆ. ರಾತ್ರಿಯಲ್ಲಿ ಪಾರಣೆ ಮಾಡುವಂತಿಲ್ಲ.

ಕೃಷ್ಣಜಯಂತಿಯಲ್ಲಿ ಅಷ್ಟಮೀತಿಥಿ ಮತ್ತು ರೋಹಿಣೀನಕ್ಷತ್ರ ಎರಡೂ ಮುಗಿದ ಬಳಿಕ ಪಾರಣೆ.[4]

ಕೆಲವರು ಇದನ್ನು ಅನುಸರಿಸದೇ ಯಾವಾಗಲೂ ಪ್ರಾತಃಕಾಲದಲ್ಲಿಯೇ ಪಾರಣೆ ಎನ್ನುತ್ತಾರೆ. ಅದು ತಪ್ಪು. **ಶ್ರೀ ವಾದಿರಾಜಗುರುಸಾರ್ವಭೌಮರು ತಮ್ಮ ಏಕಾದಶೀನಿರ್ಣಯದಲ್ಲಿ ತಿಥಿ ಮುಗಿದ ನಂತರ ಪಾರಣೆ ಮಾಡುವದು ಶಿಷ್ಟಾಚಾರ ಎಂದು ಪ್ರತಿಪಾದಿಸಿದ್ದಾರೆ.**

---

[4] ಸೂರ್ಯಾಸ್ತ ಮತ್ತು ಸೂರ್ಯೋದಯಗಳ ಸಮಯದಲ್ಲಿ ಸರಿಯಾದ ಮಧ್ಯಭಾಗ ಅರ್ಧರಾತ್ರಿ ಎಂದು ಕರೆಸಿಕೊಳ್ಳುತ್ತದೆ. ಆ ಮಧ್ಯರಾತ್ರಿಯ ಸಮಯಕ್ಕೆ ಅಷ್ಟಮೀ, ರೋಹಿಣೀ ಎರಡೂ ಇದ್ದರೆ ಜಯಂತಿ. ಇಲ್ಲದಿದ್ದಲ್ಲಿ ಕೃಷ್ಣಾಷ್ಟಮಿ. ಮಧ್ಯರಾತ್ರಿಯಲ್ಲಿ ಕೇವಲ ಅಷ್ಟಮಿಯಿದ್ದರೂ, ಕೇವಲ ರೋಹಿಣಿಯಿದ್ದರೂ ಜಯಂತಿಯಾಗುವದಿಲ್ಲ. ಎರಡೂ ಒಟ್ಟಿಗೆ ಇರಬೇಕು.

ಕೃಷ್ಣಾಷ್ಟಮೀವ್ರತದ ಸಂಪೂರ್ತಿಗಾಗಿ ಮಾರನೆಯ ದಿವಸ ಪೂಜೆ ಮುಗಿದ ನಂತರ ನಮಗೆ ಶಕ್ತಿಯಿದ್ದಷ್ಟು ವಿಷ್ಣುಭಕ್ತರಾದ ಸಜ್ಜನರಿಗೆ ದಾನವನ್ನು ನೀಡಬೇಕು ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ — **ಶಕ್ತಿತೋ ದೀಯತಾಂ ಧನಮ್**

ಆ ನಂತರ
**ಸರ್ವಾಯ ಸರ್ವಪತಯೇ ಸರ್ವೇಶ್ವರಾಯ ಸರ್ವಸಂಭವಾಯ ಶ್ರೀಗೋವಿಂದಾಯ ನಮೋನಮಃ**

ಎಂಬ ಮಂತ್ರವನ್ನು ಪಠಿಸಿ ಪರಮಾತ್ಮನಿಗೆ ಸರ್ವಸ್ವವನ್ನೂ ಒಪ್ಪಿಸಿಕೊಂಡು ಪಾರಣಕ್ಕೆ ಕೂಡಬೇಕು.

ಸರ್ವಾಯ ಸರ್ವ ಪದಾರ್ಥಗಳಲ್ಲಿಯೂ ವ್ಯಾಪಿಸಿ ಇರುವದರಿಂದ ಸರ್ವ ಎಂದು ಕರೆಸಿಕೊಳ್ಳುವ ಸರ್ವಪತಯೇ ಸರ್ವಪದಾರ್ಥಗಳ ಒಡೆಯನಾದ ಸರ್ವೇಶ್ವರಾಯ ಸರ್ವಜೀವರಾಶಿಗಳ ಅಂತರ್ಯಾಮಿಯಾದ

ಸರ್ವಸಂಭವಾಯ ಸಕಲ ಪದಾರ್ಥಗಳ ಸೃಷ್ಟಿಗೆ ಕಾರಣನಾದ ಶ್ರೀಗೋವಿಂದಾಯ ರುಗ್ಮಿಣೀಪತಿಯಾದ ಶ್ರೀಕೃಷ್ಣನಿಗೆ ನಮೋನಮಃ ಅನಂತ ನಮಸ್ಕಾರಗಳು ಎಂದು ತುತ್ತುತುತ್ತಿಗೆ ದೇವರನ್ನು ಸ್ಮರಿಸುತ್ತ, ಹಿಂದಿನ ದಿವಸದ ಹಸಿವು ನೀರಡಿಕೆಗಳನ್ನು, ಇಂದಿನ ದಿವಸದ ಭೋಜನದ ತೃಪ್ತಿಯನ್ನು ಪರಮಾತ್ಮನಿಗೆ ಸಮರ್ಪಿಸುತ್ತ ಊಟಮಾಡಬೇಕು.

## ವ್ರತಸಮರ್ಪಣೆ

ಊಟದ ಬಳಿಕ ಆಚಮನವನ್ನು ಮಾಡಿ, ತೀರ್ಥ ತುಳಸೀದಳಗಳನ್ನು ಸ್ವೀಕರಿಸಿ, ದೇವರ ಮುಂದೆ ಮಂಡಿಯೂರಿ ಕುಳಿತು

**ಧರ್ಮಾಯ ದರ್ಮಪತಯೇ ದರ್ಮೇಶ್ವರಾಯ ಧರ್ಮಸಂಭವಾಯ ಶ್ರೀಗೋವಿಂದಾಯ ನಮೋನಮಃ**

ಎಂದು ಸಮಗ್ರ ಕೃಷ್ಣಾಷ್ಟಮೀವ್ರತದ ಪುಣ್ಯವನ್ನು ಶ್ರೀಕೃಷ್ಣನಿಗೆ ಸಮರ್ಪಿಸಿಕೊಳ್ಳಬೇಕು.

ಧರ್ಮಾಯ ಎಲ್ಲರನ್ನೂ ಧಾರಣೆ ಮಾಡಿರುವದರಿಂದ ಧರ್ಮ ಎಂದು ಕರೆಸಿಕೊಳ್ಳುವ ಧರ್ಮಪತಯೇ ಧರ್ಮದ ಆಚರಣೆಯನ್ನು ಮಾಡುವ ಜನರ ಒಡೆಯನಾದ ಧರ್ಮೇಶ್ವರಾಯ ಯಾವುದು ಧರ್ಮ ಯಾವುದು ಅಧರ್ಮ ಎಂದು ನಿರ್ಣಯಿಸುವ ಸ್ವಾಮಿಯಾದ ಧರ್ಮಸಂಭವಾಯ ನಾವು ಮಾಡುವ ಸತ್ಕರ್ಮಗಳಿಂದ ನಮಗೆ ಒಲಿದು ನಮ್ಮ ಹೃದಯಕಮಲದಲ್ಲಿ ಗೋಚರನಾಗುವ ಶ್ರೀಗೋವಿಂದಾಯ ಶ್ರೀ ಭೂಸಮೇತನಾದ ಶ್ರೀಹರಿಗೆ ನಮೋನಮಃ ಅನಂತಾನಂತ ನಮಸ್ಕಾರಗಳು ಎಂದು

ಈ ಕೃಷ್ಣಾಷ್ಟಮೀವ್ರತವನ್ನು ನನ್ನೊಳಗೆ ನಿಂತ ಶ್ರೀಹರಿ ಮತ್ತು ತತ್ವಾಭಿಮಾನಿ ದೇವತೆಗಳು ಮಾಡಿಸಿದ್ದಾರೆ ಎಂದು ತಿಳಿದು ದೇವರಿಂದ ಆರಂಭಿಸಿ ನಮ್ಮ ಗುರುಗಳ ವರೆಗಿನ ಸಮಗ್ರ ಗುರುಪರಂಪರೆಯನ್ನು ಭಕ್ತಿಯಿಂದ ನೆನೆದು ಅವರಿಗೆ ಸಮಗ್ರ ಕೃಷ್ಣಾಷ್ಟಮಿಯ ವ್ರತದ ಪುಣ್ಯವನ್ನು ಸಮರ್ಪಿಸಬೇಕು.

ಸ್ಕಂದಪುರಾಣದಲ್ಲಿ ಕೃಷ್ಣಾಷ್ಟಮಿಯ ಕುರಿತ ಮಾತು ಹೀಗಿದೆ —

**ಜನ್ಮಾಷ್ಟಮೀವ್ರತಂ ಯೇ ವೈ**
**ಪ್ರಕುರ್ವಂತಿ ನರೋತ್ತಮಾಃ ।**
**ಕಾರಯಂತಿ ಚ ವಿಪ್ರೇಂದ್ರ ಲ**
**ಕ್ಷ್ಮೀಸ್ತೇಷಾಂ ಸದಾ ಸ್ಥಿರಾ ।**

**ಸ್ಮರಣಂ ವಾಸುದೇವಸ್ಯ**
**ಮೃತ್ಯುಕಾಲೇ ಭವೇನ್ಮನೇ ।**
**ಸಿದ್ಧ್ಯಂತಿ ಸರ್ವಕಾರ್ಯಾಣಿ**
**ಕೃತೇ ಕೃಷ್ಣಾಷ್ಟಮೀವ್ರತೇ ।**

ಮನುಷ್ಯಜನ್ಮವನ್ನು ಪಡೆದು ಸದ್ಗುಣಗಳಿಂದ ಉತ್ತಮರಾದ ಸಜ್ಜನರು, ತಾವೂ ಕೃಷ್ಣಾಷ್ಟಮೀ ವ್ರತವನ್ನು ಮಾಡಿ, ತಮ್ಮವರಿಂದಲೂ ಮಾಡಿಸುತ್ತಾರೆಯೋ ಅವರ ಮನೆಯಲ್ಲಿ ಸತ್ಸಂಪತ್ತು ಸ್ಥಿರವಾಗಿರುತ್ತದೆ, ಲಕ್ಷ್ಮೀದೇವಿ ಶಾಶ್ವತವಾಗಿ ನೆಲೆಸುತ್ತಾಳೆ.

ಕೃಷ್ಣಾಷ್ಟಮೀ ವ್ರತವನ್ನು ಮಾಡಿದ ಮನುಷ್ಯನ ಎಲ್ಲ ಕಾರ್ಯಗಳೂ ನಿರ್ವಿಘ್ನವಾಗಿ ಸಿದ್ಧವಾಗುತ್ತವೆ. ಅಂತ್ಯಕಾಲದಲ್ಲಿ ಶ್ರೀಹರಿಯ ಸ್ಮರಣೆ ಒದಗಿಬರುತ್ತದೆ.

ಇದಕ್ಕಿಂತ ಹೆಚ್ಚಿನ ಸೌಭಾಗ್ಯ ಬೇಕೆ?

ಶ್ರೀ ಕೃಷ್ಣಾಷ್ಟಮಿಯಂದು ಶ್ರದ್ಧೆಯಿಂದ ಉಪವಾಸ ಮಾಡಿ, ಭಕ್ತಿಯಿಂದ ಅರ್ಚನೆಯನ್ನು ಮಾಡಿ, ಅರ್ಘ್ಯವನ್ನು ನೀಡಿ, ಆದರದಿಂದ ಪಾರಣೆಯನ್ನು ಮಾಡಿ ಶ್ರೀಕೃಷ್ಣನಿಗೆ ಸಮರ್ಪಿಸಿ. ನಿಮ್ಮ ಮನೆಯಲ್ಲಿ ಶ್ರೀಲಕ್ಷ್ಮೀನಾರಾಯಣರು ನೆಲೆಗೊಳ್ಳಲಿ, ನಿಮ್ಮ ಮನಸ್ಸಿನ ಅಭೀಷ್ಟಗಳು ಪೂರ್ಣವಾಗಲಿ, ಸದಾ ಭಗವಂತನ ಸ್ಮರಣೆ ನಿಮಗೊದಗಿ ಬರಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491